**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**
**<u>ಸಿ.ಸಿ.490/2023</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಅಜಯ್ | ಫ್ರಾಸಾ -7 |
| ತಂದೆಯ ಹೆಸರು | : ಪ್ರೇಮ್ ಕುಮಾರ್ | ಚಾಸಾ-5 |
| ವಯಸ್ಸು | : 39 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ02.12.2024 |
| ವಾಸಸ್ಥಳ | : ಕಳಸ | |

**<u>:ಮುಖ್ಯ ವಿಚಾರಣೆ ಪ್ರಾಜ್ಞ್ಯಾ.ಸ.ಸ.ಅ. ರವರಿಂದ:</u>**

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ಈ ಹಿಂದೆ ಪೋಲಿಸ್ ಠಾಣೆಯಲ್ಲಿ ನೋಡಿದ್ದೇನೆ. ಚಾಸಾ-6 ರವರ ಪರಿಚಯ ನನಗಿದೆ.

ಸಾಕ್ಷಿಯು ನಿಪಿ-12 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿ, ನಿಪಿ-13 ಮತ್ತು 14 ರ ಪೊಟೋಗಳಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-12(ಬಿ) ಎಂದು ಗುರುತಿಸಲಾಯಿತು.

2 ವರ್ಷದ ಹಿಂದೆ ನಾನು ಕಳಸ ಟೌನ್ ನಲ್ಲಿ ಇದ್ದಾಗ ಕಳಸ ಪೋಲಿಸರು ನನ್ನನ್ನು ಠಾಣೆಗೆ ಕರೆಸಿ ಅಲ್ಲಿ ನಿಪಿ-12 ಕ್ಕೆ ಸಹಿ ಪಡೆದು ನಿಪಿ-13 ಮತ್ತು 14 ರ ಪೊಟೊಗಳನ್ನು ಅಲ್ಲಿಯೇ ತೆಗೆದಿದ್ದಾರೆ. ಯಾವ ವಿಚಾರಕ್ಕೆ ನನ್ನ ಸಹಿಯನ್ನು ಪಡೆದು ಪೋಟೋ ತೆಗೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಈಗ ನೋಡುತ್ತಿರುವ ಶರ್ಟ್ ನ್ನು ನಾನು ಈ ಹಿಂದೆ ಪೋಲಿಸ್ ಠಾಣೆಯಲ್ಲಿ ನೋಡಿದ್ದೆ ಆದರೆ ಅದರ ಬೆಗ್ಗ ನನಗೆ ಏನು ಗೊತ್ತಿಲ್ಲ. ಸಾಕ್ಷಿಯು ಗುರುತಿಸಿದ ಶರ್ಟ್ ನ್ನು ಎಂ.ಒ.4 ಮತ್ತು ಶರ್ಟ್ ಇರುವ ಬ್ಯಾಗ್ ನ್ನು ಎಂ.ಒ.5, ಅದರ ಮೇಲಿನ ಸಾಕ್ಷಿಯ ಸಹಿಯನ್ನು ಎಂ.ಒ.5(ಎ) ಎಂದು ಗುರುತಿಸಲಾಯಿತು. ಆ ದಿನ ಪೋಲಿಸರು ನನ್ನ ಸಮಕ್ಷಮ ಎಂ.ಒ.4 ನ್ನು ಪಡೆದಿದ್ದು ಅದನ್ನು ಯಾರಿಂದ ಪಡೆದುಕೊಂಡರು ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ.ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲು: ಪ್ರಾಜ್ಞ್ಯಾ.ಸ.ಸ.ಅ. ರವರಿಂದ:</u>**

ದಿ.27.11.2022 ರಂದು ರಾ.10.00 ರಿಂದ 10.30 ರ ಸಮಯಕ್ಕೆ ನಾನು ನಿಪಿ-12 ಕ್ಕೆ ಸಹಿ ಮಾಡಿದ್ದೆ ಎಂದರೆ ಸರಿ. ಆ ದಿನ ಆರೋಪಿಯೂ ಹಾಜರುಪಡಿಸಿದ ಎಂ.ಒ.4 ರ ಶರ್ಟ್ ನ್ನು ಪೋಲಿಸರು ವಶಕ್ಕೆ ಪಡೆದ ಸಂಬಂಧ ನನ್ನ ಸಹಿ ಮತ್ತು ಪೋಟೋಗಳನ್ನು ಪಡೆಯಲಾಗಿದೆ ಎಂದರೆ ಸರಿ. ಚಾಸಾ-2 ಮತ್ತು ಆರೋಪಿಯ ನಡುವಿನ ಜಗಳದ ಸಮಯಕ್ಕೆ ತಾನು ಧರಿಸಿದ್ದ ಶರ್ಟ್ ಎಂದು ಎಂ.ಒ.4 ನ್ನು

ಆರೋಪಿಯು ಹಾಜರುಪಡಿಸಿದ್ದರು ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಜಿ.ಬಿ.ವಿ. ವಕೀಲರಿಂದಃ**

ಯಾವ ಬಣ್ಣದ ಶರ್ಟ್ ನ್ನು ನನ್ನ ಸಮಕ್ಷಮ ವಶಕ್ಕೆ ಪಡೆದರು ಎಂದು ನನಗೆ ಗೊತ್ತಿಲ್ಲ. ಯಾವ ವಿಚಾರಕ್ಕೆ ಆ ಶರ್ಟ್ ನ್ನು ಪಡೆದರು ಎಂದು ನನಗೆ ಗೊತ್ತಿಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.